# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 02/2019**

**ದೋ.ಸಾ. : 04 ಫ್ರಾ.ಸಾ. : 02**

**ದಿನಾಂಕಃ 22-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಆರ್.ವಿ.ಎನ್ ವಕೀಲರಿಂದ**

5. ನಾನು ಕಳೆದ 8 ವರ್ಷಗಳಿಂದ ಆಶಾ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಕೆಲಸಕ್ಕೆ ನಿರ್ದಿಷ್ಟ ಸಮಯ ಇರುವುದಿಲ್ಲ. ನಾವು ಎಲ್ಲಿಯಾದರೂ ಹೊರಗೆ ಹೋಗಬೇಕಾದರೆ, ನಮ್ಮ ಮೇಲ್ವಿಚಾರಕರಾದ ಮಹಿಳಾ ಆರೋಗ್ಯ ಸಹಾಯಕಿಗೆ ತಿಳಿಸಿ ಹೋಗಬೇಕಾಗುತ್ತದೆ. ನನ್ನ ಗಂಡನಿಗೆ ಒಟ್ಟು 8 ಜನ ಅಣ್ಣ-ತಮ್ಮಂದಿರು ಇರುತ್ತಾರೆ, ಅವರ ಪೈಕಿ ಶಿವರಾಮ ಶಿವಾ ಪಟಗಾರ ರವರ ಹೆಸರಿನಲ್ಲಿ ಜಮೀನು ಇರುತ್ತದೆ. ಕುಮಟಾ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿರುವ ಪ್ರಕರಣಕ್ಕೆ ನಮ್ಮ ಕುಟುಂಬದವರು ಇರುತ್ತಾರೆ ಎಂದರೆ ಸರಿ. ನಾವು ದಿಃ 12-11-2017 ರ ಬೆಳಿಗ್ಗೆ 11-30 ರ ಸಮಯದಲ್ಲಿ ಬಸ್ ನಿಲ್ದಾಣದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪಿರ್ಯಾದಿ ಹಾಗೂ ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ಚಾಸಾ-1 ರವರು ಮನೆಯ ಬಳಿ ಬಂದಿಲ್ಲ, ಅವರನ್ನು ಮನೆಯ ಒಳಗೆ ದೂಡಿ ಹಾಕಿ, ಬಾಗಿಲು ಹಾಕಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಃ 45/ಬ ರಲ್ಲಿ ನಮ್ಮ ಮನೆ ಇರುವುದಿಲ್ಲ. ನಾನು ಚಾಸಾ-1 ರವರ ಮನೆಯ ಬಾಗಿಲದ ಚಿಲಕ ತೆಗೆದು, ಚಾಸಾ-1 ರವರ ಬಳಿ ಘಟನೆಯ ಬಗ್ಗೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-1 ರವರು ಘಟನೆಯ ಕುರಿತು ನನ್ನ ಬಳಿ ಯಾವುದೇ ವಿಷಯವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

6. ಬಿ.ಪಿ.ಎಲ್ ಪಡಿತರ ಚೀಟಿ ಇರುವವರೆಗೆ ಅಕ್ಕಿ, ಗೋಧಿ, ಸೀಮೆ ಎಣ್ಣೆ ನೀಡುತ್ತಾರೆ, ಆದರೆ ಎ.ಪಿ.ಎಲ್ ಪಡಿತರ ಚೀಟಿ ಇರುವವರೆಗೆ ನೀಡುವುದಿಲ್ಲ. ಎ.ಪಿ.ಎಲ್ ಪಡಿತರ ಚೀಟಿ ಇರುವವರೆಗೂ ಸಹ ಸೀಮೆ ಎಣ್ಣೆ ನೀಡುತ್ತಾರೆ ಎಂದರೆ ಸರಿಯಲ್ಲ. ಸೀಮೆ ಎಣ್ಣೆಯನ್ನು ಅಂಗಡಿಯಲ್ಲಿ ಮಾರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಬಹುದು, ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಚಾಸಾ-1 ರವರು

ಆರೋಪಿತರು ವಿರುದ್ಧ ದೂರನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಆರೋಪಿತರು ಸುಮಾರು ತಿಂಗಳುಗಳ ಕಾಲ ಜೈಲಿನಲ್ಲಿದ್ದರು ಎಂದರೆ ಸರಿ. ಆರೋಪಿತರು ಅವರ ಜಮೀನಿಗೆ ಬಂದು, ಉಳುವೆ ಮಾಡಲು ಕೊಡಬಾರದು ಎಂದು, ಚಾಸಾ-1 ರವರು ಧಮಕಿ ಹಾಕಿದ್ದರು ಎಂದರೆ ಸರಿಯಲ್ಲ. ಬೆಳೆ ನಾಶ ಮಾಡಿದ ಸಂಬಂಧ ಹಾಗೂ ಚಾಸಾ-1 ರವರು ಆರೋಪಿತರ ಮೇಲೆ ಹಲ್ಲೆ ಮಾಡಿದ ಸಂಬಂಧ, ಆರೋಪಿತರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ಪ್ರಮೋದ ರಾವ್ ರವರು ಅಂಕೋಲಾ ಪೊಲೀಸ್ ಠಾಣೆಯ ಸಿ.ಪಿ.ಐ ಅಧಿಕಾರಿಯಾದ ಕಾರಣ, ಆರೋಪಿಗಳು ನೀಡಿದ ದೂರನ್ನು ಸ್ವೀಕರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

7. ಬೆಂಕಿ ಪೊಟ್ಟಣ ಯಾವ ಕಂಪನಿಯದು ಎಂದು ನಾನು ನೋಡಿರುವುದಿಲ್ಲ. ಮುದ್ದೆ ಮಾಲು-1 ರಿಂದ 3 ಆರೋಪಿಗಳಿಗೆ ಸೇರಿದ ವಸ್ತುಗಳಲ್ಲ ಅವುಗಳು ಚಾಸಾ-1 ರವರಿಗೆ ಸೇರಿದ ವಸ್ತುಗಳು ಎಂದರೆ ಸರಿಯಲ್ಲ. 1 ನೇ ಆರೋಪಿಯು ಎಂದಿಗೂ ಚಾಸಾ-1 ರವರ ಮನೆಯ ಬಳಿ ಬೆಂಕಿ ಪೊಟ್ಟಣ ಮತ್ತು ಸೀಮೆ ಎಣ್ಣೆಯನ್ನು ತೆಗೆದುಕೊಂಡು ಹೋಗಿದ್ದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಪೊಲೀಸರು 1 ನೇ ಆರೋಪಿಯನ್ನು ಪಂಚನಾಮೆಗೆ ಕರೆದುಕೊಂಡು ಬಂದಿದ್ದನ್ನು ನಾನು ನೋಡಿರುವುದಿಲ್ಲ ಹಾಗೂ ನನ್ನ ಸಮಕ್ಷಮ ಪಂಚನಾಮೆ ಮಾಡಿ, ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು 1 ನೇ ಆರೋಪಿಯನ್ನು ಚಾಸಾ-1 ರವರ ಮನೆಯ ಬಳಿ ಕರೆದುಕೊಂಡು ಬಂದಾಗ, ನಾನು ಅಲ್ಲಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನು ಚಾಸಾ-1 ರವರ ಜಮೀನಿಗೆ ಲಗತ್ತಾಗಿರುವ ಕಾರಣ ಹಾಗೂ ಅವರು ನಮಗೆ ಪರಿಚಯ ಇರುವ ಕಾರಣ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ